ಓ.ಎಸ್. ನಂ. 39/2017
ಪಿ.ಡಬ್ಲ್ಯೂ- 1

(ಇಂದು ದಿಃ 09-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಮುಂದುವರೆದ ಪಾಟೀ ಸವಾಲು **:- ಶ್ರೀ. SKD** ವಕೀಲರಿಂದ **:-**

ಸರ್ವೆ ನಂ. 121 ರಲ್ಲಿ ಹಿಸ್ಸೆಗಳು ಆಗಿವೆ ಎಷ್ಟು ಹಿಸ್ಸೆ ಆಗಿವೆ ನನಗೆ ಗೊತ್ತಿಲ್ಲದಿ ಸರ್ವೆ ನಂ. 121/1/B ವಿಸ್ತೀರ್ಣ 5 ಎಕರೆ 3 ನೇ ಪ್ರತಿವಾದಿ ಸತ್ಯನಾರಾಯಣ ಹೆಸರಿಗೆ ಆಗಿದೆ ಎಂದರೆ ಸರಿ. ಸರ್ವೆ ನಂ. 119 ಮತ್ತು 121 ಹೊರತು ಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಜಮೀನುಗಳು ಇವೆ ಎಂದರೆ ಸರಿ. ಅವುಗಳ ಸರ್ವೆ ನಂಬರ, ವಿಸ್ತೀರ್ಣ ಮತ್ತು ಚೆಕಬಂದಿ ಹೇಳಲು ಆಗುವುದಿಲ್ಲ. ನನ್ನ ತಾತನಿಗೆ ಇಬ್ಬರು ಮಕ್ಕಳು, ಅವುರುಗಳೆಂದರೆ ದೊಡ್ಡನರಸರೆಡ್ಡಿ ಮತ್ತು ಸಣ್ಣನರಸರೆಡ್ಡಿ. ಅವರಿಬ್ಬರು ವಿಭಾಗ ಮಾಡಿಕೊಂಡಿರಲಿಲ್ಲ. ನಾನು ದೊಡ್ಡ ನರಸರೆಡ್ಡಿ ಮಗ. ಸಣ್ಣನರಸರೆಡ್ಡಿ ಅವಿವಾಹತರಾಗಿ ತೀರಿಹೋಗಿದ್ದಾರೆ. ದೊಡ್ಡನರಸರೆಡ್ಡಿಗೆ ಒಬ್ಬಳು ಅಕ್ಕ ಇದ್ದಾಳೆ. ಅವಳ ಹೆಸರು ಕಿಷ್ಟಮ್ಮ.

3 ನೇ ಪ್ರತಿವಾದಿ ಹೆಸರಿಗೆ ಬಂದ ಸರ್ವೆ ನಂ. 121/1/B ಸಂಬಂಧ ಕಂದಾಯ ದಾಖಲಾತಿಗಳನ್ನು ನಾನು ಕಂದಾಯ ನ್ಯಾಯಾಲಯಗಳಲ್ಲಿ ಪ್ರಶ್ನೇ ಮಾಡಿಲ್ಲ ಎಂದರೆ ಸರಿ. ಸದರಿ ಜಮೀನು 3 ನೇ ಪ್ರತಿವಾದಿ ತೀರಿಹೋದ ನಂತರ ಆತನ ಮಕ್ಕಳ ಸ್ವಾಧಿನದಲ್ಲಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮಾರುಕಟ್ಟೆ ಮೌಲ್ಯ ಹೆಚ್ಚಾಗಿರುವ ಕಾರಣ 3 ನೇ ಪ್ರತಿವಾದಿ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಜನಿಸುವ ಮುಂಚೆ ದಾವಾ ಸರ್ವೆ ನಂಬರ ಜಮೀನುಗಳು ವೆಂಕಟಯ್ಯ ರವರ ಹೆಸರಿನಲ್ಲಿದ್ದವು ಎಂದರೆ ಸರಿಯಲ್ಲ. ಯಾವತ್ತು ವೆಂಕಟಯ್ಯನ ಹೆಸರಿನಲ್ಲಿದ್ದ ಪಹಣಿಗಳನ್ನು ನನ್ನ ತಂದೆ ಆಗಲಿ ಅವರ ಸಹೋದರರು ಆಗಲಿ ಪ್ರಶ್ನೇ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿಹೋಗಿ 7 ವರ್ಷ ಅಗಿದೆ. ನನ್ನ ತಾಯಿ ನನ್ನ ತಂದೆಗಿಂತ ಮೊದಲು ತೀರಿಹೋಗಿದ್ದಾರೆ. 3 ನೇ ಪ್ರತಿವಾದಿ ಜಮೀನನ್ನು ಖರೀದಿ ಮಾಡಿದ ದಿನದಿಂದ ಖರೀದಿ ಮಾಡಿದ ಜಮೀನು ಅವರ ಸ್ವಾಧಿನದಲ್ಲಿಯೇ ಇತ್ತು ಎಂದರೆ ಸರಿಯಲ್ಲ. ಅವರ ತೀರಿಹೋದ ನಂತರ ಅವರ ಮಕ್ಕಳ ಸ್ವಾಧಿನದಲ್ಲಿದೆ ಎಂದರೆ ಸರಿಯಲ್ಲ.

ಸರ್ವೆ ನಂ. 121 ರಲ್ಲಿ ಬೇರೆಯವರಿಗೆ ಜಮೀನು ಮಾರಾಟ ಮಾಡಿದ್ದೀರಿ ಎಂದರೆ ಈ ದಾವೆ ದಾಖಲಾದ ನಂತರ ಮಾಡಿದ್ದೇವೆ ಎಂದು ಹೇಳುತ್ತಾರೆ.

(**ಶ್ರೀ. SKD** ವಕೀಲರು **ಶ್ರೀ. BSS** ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಮುಂದುವರೆದ ಪಾಟೀ ಸವಾಲು ಎಂದು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು

ನೀಡಲಾಯಿತು.)

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.